# ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಸಂಖ್ಯೆ: ಆ.ಇ. 2 ಎಸ್‌ಆರ್‌ಪಿ(ಸೇ:3)86 ಬೆಂಗಳೂರು, ದಿನಾಂಕ: 3ನೇ ಜೂನ್, 1986.

## ಅಧಿಕೃತ ಜ್ಞಾಪನ ಪತ್ರ

ವಿಷಯ: ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆ — ಸದಸ್ಯರ ರಿಜಿಸ್ಟರನ್ನು ಸರಿಯಾಗಿ ತಯಾರಿಸಿ ಇಟ್ಟುಕೊಳ್ಳುವ ಬಗ್ಗೆ ಆದೇಶಗಳು

---

1981ರ ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆಯ ನಿಯಮಗಳ 16ನೇ ನಿಯಮದ ಪ್ರಕಾರ —

(1) ಕಛೇರಿಯ ಮುಖ್ಯಾಧಿಕಾರಿಯವರು ಸದಸ್ಯರ ಗುಂಪುವಾರು (Groupwise ) ರಿಜಿಸ್ಟರನ್ನು ನಮೂನೆ 8ರಲ್ಲಿ ಇಟ್ಟುಕೊಂಡು ಬರಲಾಗಿದೆ ಮತ್ತು ಅದರಲ್ಲಿ ಇಂದಿನವರೆಗಿನ ವಿವರಗಳನ್ನು ನಮೂದಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(2) ಈ ಯೋಜನೆಯ ಅಡಿಯಲ್ಲಿ ವಿಮಾ ನಿಧಿಗೆ ಅಥವಾ ವಿಮಾ ನಿಧಿ ಮತ್ತು ಉಳಿತಾಯ ನಿಧಿಗೆ ಸೇರಿರುವ ಎಲ್ಲಾ ನೌಕರರಿಂದ ಸಮುಚಿತವಾಗಿ ಅಂಶದಾನಗಳನ್ನು ವಸೂಲು ಮಾಡಿಕೊಳ್ಳಲಾಗಿದೆಯೇ ಇಲ್ಲವೇ ಎಂಬುದನ್ನು ಸತ್ಯಾಪನೆ ಮಾಡಲು ಮತ್ತು ಆ ಬಗ್ಗೆ ಒಂದು ಪ್ರಮಾಣ ಪತ್ರವನ್ನು ಅದರಲ್ಲಿ ದಾಖಲು ಮಾಡಲು, ಈ ರಿಜಿಸ್ಟರನ್ನು ವರ್ಷಕ್ಕೊಮ್ಮೆ ಹಣ ತರಿಸುವ ಮತ್ತು ಹಣ ಬಟವಾಡೆ ಮಾಡುವ (Drawing and Disbursement Officer) ಸಂಬಂಧಪಟ್ಟ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು.

Office of the Deputy Commissioner
Mysore Di...
...1986
6418
17-6-86

2. ಸರ್ಕಾರದ ಕೆಲವು ಕಛೇರಿಗಳಲ್ಲಿ ಪ್ರಸ್ತುತ ನಿಯಮಗಳಲ್ಲಿ ವಿಧಿಸಿದಂತೆ, ಸದಸ್ಯರ ರಿಜಿಸ್ಟರನ್ನು ಸರಿಯಾಗಿ ತಯಾರಿಸಿ ಇಟ್ಟುಕೊಂಡಿಲ್ಲವೆಂದು ಹಾಗೂ ಅದನ್ನು ವರ್ಷಕ್ಕೊಮ್ಮೆ ಹಣ ತರಿಸುವ ಮತ್ತು ಹಣ ಬಟವಾಡೆ ಮಾಡುವ ಸಂಬಂಧಪಟ್ಟ ಅಧಿಕಾರಿಗಳು ತಪಾಸಣೆ ಮಾಡಿ ಪ್ರಮಾಣ ಪತ್ರವನ್ನು ದಾಖಲುಮಾಡುತ್ತಿಲ್ಲವೆಂದೂ ಸರ್ಕಾರದ ಗಮನಕ್ಕೆ ಬಂದಿದೆ. ಸದಸ್ಯರ ರಿಜಿಸ್ಟರ್ ಒಂದು ಅತಿ ಮುಖ್ಯವಾದ ದಾಖಲೆ. ಇದನ್ನು ಸರಿಯಾಗಿ ತಯಾರಿಸಿ ಇಡುವುದು ಅತ್ಯಗತ್ಯ. ಈ ವಿಷಯದಲ್ಲಿ ಅಸಡ್ಡೆ ಅಥವಾ ಉದಾಸೀನತೆ ಅಕ್ಷಮ್ಯ. ಆದುದರಿಂದ, ಈ ದಾಖಲೆಯನ್ನು ಸರಿಯಾಗಿ ಇಟ್ಟುಕೊಳ್ಳುವಂತೆ ಈ ಕೆಳಗಿನ ಆದೇಶಗಳನ್ನು ಸರ್ಕಾರವು ಹೊರಡಿಸಿದೆ:—

(ಅ) ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ಉಳಿದ ಮೇಲ್ವಿಚಾರಕ ಅಧಿಕಾರಿಗಳು ತಮ್ಮ ನಿಯಂತ್ರಣದಲ್ಲಿರುವ ಕಛೇರಿಗಳ ವಾರ್ಷಿಕ ತಪಾಸಣೆಯ ಕಾಲದಲ್ಲಿ ಕಂಡಿಕೆ(1)ರಲ್ಲಿ ಉಲ್ಲೇಖಿಸಿದಂತೆ, ಕಛೇರಿಯ ಮುಖ್ಯಾಧಿಕಾರಿಯವರು ಸದಸ್ಯರ ರಿಜಿಸ್ಟರನ್ನು ಸರಿಯಾಗಿ ಇಟ್ಟುಕೊಂಡಿದ್ದಾರೆಂದು ಮತ್ತು ಎಲ್ಲಾ ಸರ್ಕಾರಿ ನೌಕರರಿಂದ ಸಮುಚಿತವಾಗಿ ಅಂಶದಾನಗಳನ್ನು ವಸೂಲು ಮಾಡಲಾಗುತ್ತಿದೆಯೆಂದು ಹಾಗೂ ಈ ಬಗ್ಗೆ ಸಂಬಂಧಪಟ್ಟ ಹಣ ತರಿಸುವ ಮತ್ತು ಹಣ ಬಟವಾಡೆ ಮಾಡುವ ಅಧಿಕಾರಿಗಳು ಪ್ರಮಾಣ ಪತ್ರವನ್ನು ರಿಜಿಸ್ಟರನಲ್ಲಿ ದಾಖಲು ಮಾಡಿದ್ದಾರೆಂದೂ ಖಚಿತಪಡಿಸಿಕೊಳ್ಳಬೇಕು,

ಮು.ತಿ.ನೋ.

THE SPECIAL DEPUTY CO...
MYSORE DIST...
MYSORE
15/6

(ಆ) ತಪಾಸಣೆಯ ಕಾಲದಲ್ಲಿ ಈ ಬಗ್ಗೆ ಯಾವುದೇ ನ್ಯೂನತೆಗಳು ಕಂಡುಬಂದಲ್ಲಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತವಾದ ಅನುದೇಶಗಳನ್ನು ಕೊಡಬೇಕು, ಮತ್ತು

(ಇ) ಎಲ್ಲಾ ಹಣ ತರಿಸುವ ಮತ್ತು ಹಣ ಬಟವಾಡೆ ಮಾಡುವ ಅಧಿಕಾರಿಗಳು ತಮ್ಮ ನಿಯಂತ್ರಣದಲ್ಲಿರುವ ಕಛೇರಿಗಳಲ್ಲಿ ತಯಾರಿಸಿಟ್ಟ ಸದಸ್ಯರ ರಿಜಿಸ್ಟರನ್ನು ವರ್ಷಕ್ಕೊಮ್ಮೆ ತಪಾಸಣೆ ಮಾಡಿ ಅದರಲ್ಲಿ ಪ್ರಮಾಣ ಪತ್ರವನ್ನು ದಾಖಲು ಮಾಡಿದ ಬಗ್ಗೆ ಪ್ರತಿ ವರ್ಷ ಜನವರಿ ತಿಂಗಳಲ್ಲಿ ಸರ್ಕಾರದ ಕಾರ್ಯದರ್ಶಿ (2), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು-1, ಇವರಿಗೆ ವರದಿಯನ್ನು ಸಲ್ಲಿಸಬೇಕು. 1985ನೇ ವರ್ಷಕ್ಕೆ ಸಂಬಂಧಿಸಿದಂತೆ, ಮೊದಲನೆ ವರದಿಯನ್ನು ಜುಲೈ 31, 1986ರ ಒಳಗೆ ಸಲ್ಲಿಸತಕ್ಕದ್ದು.

(signature) 2-6-1986
(ಎನ್. ಲಕ್ಷ್ಮಣರಾವ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವೆಚ್ಚ-6)

ಇವರಿಗೆ:

ಸರ್ಕಾರದ ಕಾರ್ಯದರ್ಶಿಗಳು
ವಿಭಾಗಾಧಿಕಾರಿಗಳು
ಇಲಾಖಾ ಮುಖ್ಯಸ್ಥರು
ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
ಮಹಾಲೇಖಪಾಲರು (ಲೆಕ್ಕಪತ್ರ)/(ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು
ರಿಜಿಸ್ಟ್ರಾರ್, ಉಚ್ಚನ್ಯಾಯಾಲಯ, ಬೆಂಗಳೂರು
ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು } ಪತ್ರದೊಂದಿಗೆ
ಕಾರ್ಯದರ್ಶಿ, ಕರ್ನಾಟಕ ವಿಧಾನ ಮಂಡಲ, ಬೆಂಗಳೂರು }
ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ, ಜಿಲ್ಲಾ ಖಜಾನೆಗಳು
ಕರ್ನಾಟಕ ಸರ್ಕಾರದ ಸಚಿವಾಲಯದ ಎಲ್ಲಾ ಶಾಖೆಗಳು
ಸಂಕಲನಕಾರರು, ಕರ್ನಾಟಕ ಗೆಜೆಟ್ ಗೆಜೆಟ್‌ನ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ
ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು
ಅಧ್ಯಕ್ಷರು, ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ, ವಿಧಾನ ಸೌಧ, ಬೆಂಗಳೂರು.
ಆಡಳಿತಗಾರರು, ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆ ಮತ್ತು
ನಿರ್ದೇಶಕರು, ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ, ಬೆಂಗಳೂರು.
ವಾರ ಪತ್ರ
ರಕ್ಷಾ ಕಡತ.